**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 873/2025**

**ಸಿ.ಡಬ್ಲ್ಯೂಃ 3, ಪಿ.ಡಬ್ಲ್ಯೂಃ 2**

| | | |
|---|---|---|
| ಸಾಕ್ಷಿದಾರರ ಹೆಸರು | : | ಮೋಹನ್ |
| ತಂದೆಯ ಹೆಸರು | : | ದುರ್ಗಪ್ಪ ನಾಯ್ಕ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಹೊಟೇಲಿನಲ್ಲಿ ಕೆಲಸ |
| ವಾಸ್ತವ್ಯ | : | ಮುಟ್ಟಳ್ಳಿ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06/11 /2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 02.10.2024 ರಂದು ನಾನು ಮನೆಯಿಂದ ಮೀನು ಮಾರುಕಟ್ಟೆಗೆ ಹೋಗುತ್ತಿರುವಾಗ ಹಳೆ ಪ್ರಿಂಟಿಂಗ್ ಪ್ರೆಸ್ ಹತ್ತಿರ ಗಲಾಟೆ ನಾನು ಹೋಗುವ ಮೊದಲೇ ಆಗಿತ್ತು. ಪೊಲೀಸರು ನನಗೆ ಪಂಚನಾಮೆಗೆ ಸಹಕರಿಸಲು ಹೇಳಿದ್ದು ಆ ಪ್ರಕಾರ ನಾನು ಸಹಕಾರ ನೀಡಿದ್ದು ಇರುತ್ತದೆ. ಪಂಚನಾ ಿಮಯನ್ನು ಮದ್ಯಾಹ್ನ 12.00 ರಿಂದ 1.00 ಗಂಟೆಯವರೆಗೆ ಮಾಡಿದ್ದು ಇರುತ್ತದೆ. ಪಂಚನಾಮೆ ಕಾಲಕ್ಕೆ ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ.

2. ಸಾಕ್ಷಿಯು ನಿಪಿ-2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಎಪ ಜಿ ವಕೀಲರಿಂದ,**

ಪಂಚನಾಮೆಗೆ ಬರಲು ನನಗೆ ಪೊಲೀಸರು ನೊಟೀಸನ್ನು ನೀಡಿದ್ದರು. ಪೊಲೀಸರಿಗೆ ನನ್ನ ಹೆಸರು ಮತ್ತು ವಿಳಾಸವನ್ನು ಯಾರು ನೀಡಿದ್ದರೆಂದು ನನಗೆ ಮಾಹಿತಿ ಇಲ್ಲ. ಪಂಚನಾಮೆ ಬರೆಯಲು ಮಾಹಿತಿಯನ್ನು ಚಾಸಾ 1 ನೀಡಿದ್ದರು. ಪಂಚನಾಮೆಯನ್ನು ಜೀಪಿನಲ್ಲಿ ಕುಳಿತುಕೊಂಡು ಬೆರಳಚ್ಚು ಮಾಡಿರುತ್ತಾರೆ. ಪಂಚನಾಮೆಯ ಪ್ರಿಂಟನ್ನು ಎಲ್ಲಿ ತೆಗೆದರು ಎಂದು ನನಗೆ ಮಾಹಿತಿ ಇಲ್ಲಾ. ನಾನು ಸಹಿ ಯನ್ನು ಗುನ್ನಾ ಸ್ಥಳದಲ್ಲಿ ಮಾಡಿರುತ್ತೇನೆ. ನಾನು ಹೇಳುವ ದಿನದಂದು ಪೊಲೀಸರು ಗುನ್ನಾ ಸ್ಥಳದಲ್ಲಿ

ಯಾವುದೇ ಪಂಚನಾಮೆ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 1 ರವರ ಸ್ನೇಹಿತನಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**